# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕ್ರ.ಸಂ:ಸಕಾನಿಇಂ(ವಿ)/ಎಸ್-6/ಸಇಂ(ತಾ)/2023-24/6507-9 ಕಛೇರಿ,

ಲಗತ್ತು:

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ದಕ್ಷಿಣ 6ನೇ ಉಪವಿಭಾಗ, ಬೆ.ವಿ.ಕಂ.,
ಜೆ.ಪಿ.ನಗರ, ಬೆಂಗಳೂರು-78

ದಿನಾಂಕ: 26/3/24

## ಗ್ರಾಹಕರ ಸಂವಾದ ಸಭೆಯ ನಡಾವಳಿಗಳು

ದಿನಾಂಕ: 16.03.2024 ರ 3 ನೇ ಶನಿವಾರದಂದು ಮಧ್ಯಾಹ್ನ 3:00 ಘಂಟೆಗೆ ಎಸ್-6 ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಎಸ್-6 ಉಪವಿಭಾಗ , ಬೆ.ವಿ.ಕಂ ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ನಡೆಸಲಾಯಿತು.ಸಭೆಗೆ ಈ ಕೆಳಕಂಡ ಅಧಿಕಾರಿಗಳು/ನೌಕರರು/ಗ್ರಾಹಕರು ಹಾಜರಿದ್ದರು.ಸಭೆಗೆ ಹಾಜರಿದ್ದರು.

ಅಧಿಕಾರಿಗಳು/ನೌಕರರು.

1. ಶ್ರೀ ಶ್ರೀನಿವಾಸ್ ಎಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಎಸ್-6 ಉಪವಿಭಾಗ(ಹೆಚ್ಚುವರಿ).
2. ಶ್ರೀಮತಿ ದೀಪಿಕಾ ಎಂ.ಎಸ್, ಸಹಾಯಕ ಇಂಜಿನಿಯರ್(ತಾಂ),ಎಸ್-6 ಉಪವಿಭಾಗ.
3. ಶ್ರೀ ಶಿವಕುಮಾರ್ , ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಎಸ್-6 ಉಪವಿಭಾಗ
4. ಶ್ರೀ ರಮೇಶ್ ದಾಸಿಗೊಂಡ್ರ , ಸಹಾಯಕ ಇಂಜಿನಿಯರ್(ವಿ), ಕಾ&ಪಾ ಘಟಕ-4. ಕೋಣನಕುಂಟೆ ಶಾಖೆ
5. ಶ್ರೀ ನಾಮಪ್ರಸಾದ್ ಟಿ.ಆರ್, ಸಹಾಯಕ ಇಂಜಿನಿಯರ್(ವಿ),ಕಾ&ಪಾ ಘಟಕ-5 ಪುಟ್ಟೇನಹಳ್ಳಿ ಶಾಖೆ
6. ಶ್ರೀ ಹೇಮಚಂದ್ರ ,ಸಹಾಯಕ ಇಂಜಿನಿಯರ್(ವಿ), ಕಾ&ಪಾ ಘಟಕ-1 ಸಾರಕ್ಕಿ ಶಾಖೆ
7. ಶ್ರೀ ಗುರುಪ್ರಸಾದ್, ಕಿರಿಯ ಇಂಜಿನಿಯರ್(ವಿ),ಕಾ&ಪಾ ಘಟಕ-1
8. ಶ್ರೀ ಶ್ರೀನಿವಾಸ್ ಟಿ.ಎನ್ , ಕಿರಿಯ ಇಂಜಿನಿಯರ್(ವಿ),ಕಾ&ಪಾ ಘಟಕ-4 ಕೋಣನಕುಂಟೆ
9. ಶ್ರೀ ಯತೀಶ್ ಕಿರಿಯ ಇಂಜಿನಿಯರ್(ವಿ), ಕಾ&ಪಾ ಘಟಕ-5 ಪುಟ್ಟೇನಹಳ್ಳಿ
10. ಶ್ರೀ ಸುಧಾಕರ್ ಕಿರಿಯ ಇಂಜಿನಿಯರ್(ವಿ), ಕಾ&ಪಾ ಘಟಕ-4 ಕೋಣನಕುಂಟೆ,

ಗ್ರಾಹಕರು:

1.ಶ್ರೀ ಲೋಕೇಶ್

2.ಶ್ರೀ ಹೇಮಂತ್‌ಕುಮಾರ್

3. ಕುಮಾರಿ ದೀಕ್ಷಿತಾ

4.ಶ್ರೀ ಪ್ರಮುಲ್

5.ಶ್ರೀ ಲೋಕೇಶ್ ಬಿ.ಸಿ

ಗ್ರಾಹಕ ಸಂವಾದ ಸಭೆಯು ಮಧ್ಯಾಹ್ನ 3:00 ಘಂಟೆಗೆ ಗೆ ಪ್ರಾರಂಭವಾಯಿತು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಎಸ್-6 ಉಪವಿಭಾಗರವರು ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರನ್ನು ಸ್ವಾಗತಿಸಿದರು. ಮತ್ತು ಎಸ್-6 ಉಪವಿಭಾಗದ ಕಾರ್ಯ ವೈಖರಿಯ ಬಗ್ಗೆ ಹಾಗೂ ತಮ್ಮ ಕುಂದುಕೊರತೆಗಳ ಬಗ್ಗೆ ತಿಳಿಸಬೇಕೆಂದು ಗ್ರಾಹಕರನ್ನು ಕೋರಿದರು. ಹಾಗೆಯೇ ಬೆ.ವಿ.ಕಂನ ಕಾರ್ಯ ವೈಖರಿಯನ್ನು ಮತ್ತಷ್ಟು ಉತ್ತಮಗೊಳಿಸುವ ಮಾರ್ಗದಲ್ಲಿ ತಮ್ಮ ಸಲಹೆಗಳನ್ನು ನೀಡಬೇಕೆಂದು ತಿಳಿಸಿದರು.

ಈ ಹಿಂದೆ ದಿನಾಂಕ 17.02.2024 ರಂದು ನಡೆದ ಗ್ರಾಹಕರ ಸಂವಾದ ಸಭೆಯಲ್ಲಿ ಗ್ರಾಹಕರು ತಿಳಿಸಿದ್ದ ಸಮಸ್ಯೆಗಳನ್ನು ನಿವಾರಿಸಲಾಗಿದೆ. ಯಾವುದೇ ಬಾಕಿ ಸಮಸ್ಯೆಗಳು ಮಾಸಿಕ ಅಂತ್ಯಕ್ಕೆ ಉಳಿದಿರುವುದಿಲ್ಲ. ಈ ಗ್ರಾಹಕ ಸಂವಾದ ಸಭೆಯಲ್ಲಿ ಹಾಜರಿದ್ದ ಗ್ರಾಹಕರು ಈ ಕೆಳಕಂಡಂತೆ ಕುಂದುಕೊರತೆಗಳನ್ನು ವ್ಯಕ್ತಪಡಿಸಿದರು

1.ಶ್ರೀ ಲೋಕೇಶ್ ರವರು ಬೆ.ವಿ.ಕಂ ನಲ್ಲಿ ಸರ್ವರ್ ಸಮಸ್ಯೆಗಳನ್ನು ನಿವಾರಿಸಬೇಕೆಂದು ಕೋರಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಬೆ.ವಿ.ಕಂ ನಲ್ಲಿ ತಂತ್ರಾಂಶದಲ್ಲಿ ಉನ್ನತೀಕರಣ (Software updation) ಇರುವುದರಿಂದ ದಿನಾಂಕ 20.03.2024 ರವರೆಗೆ ಸರ್ವರ್ ಕಾರ್ಯಸ್ಥಗಿತಗೊಂಡಿದ್ದು, ಸದರಿ ವಿಷಯವನ್ನು ದಿನಪತ್ರಿಕೆಗಳಲ್ಲಿ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ. ದಿನಾಂಕ 20.03.2024 ರ ನಂತರ ಸರ್ವರ್ ಕಾರ್ಯನಿರ್ವಹಿಸಲಿದ್ದು , ಗ್ರಾಹಕರು ಸಹಕರಿಸಬೇಕೆಂದು ತಿಳಿಸಿದರು.

2. ಶ್ರೀ ಲೋಕೇಶ್ ರವರು ಕಾ.ಹಿ.ಪಾ ಘಟಕ-1 ರ ಫ್ರೆಸ್ಟಿಜ್ ಅಪಾರ್ಟ್‌ಮೆಂಟ್ ನಲ್ಲಿ ವಿದ್ಯುತ್ ಅಡಚಣೆಯಾಗುವ ಬಗ್ಗೆ ತಿಳಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಸ್-6 ಉಪವಿಭಾಗ ರವರು ಕಾ.ಹಿ.ಪಾ ಘಟಕ-1 ಸಾರಕ್ಕಿ -1 ಘಟಕರವರಿಗೆ ವರದಿ ನೀಡುವಂತೆ ತಿಳಿಸಿದರು. ಸಹಾಯಕ ಇಂಜಿನಿಯರ್(ವಿ) ರವರು ಸದರಿ ಸ್ಥಳದಲ್ಲಿ ಇರುವ ಕೇಬಲ್ Multiple joints ಇದ್ದು ಅದನ್ನು ಬದಲಾಯಿಸಲು ಅಂದಾಜುಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು

3. ಕುಮಾರಿ ದೀಕ್ಷಿತಾ ರವರು ಆರ್,ಆರ್ ಸಂಖ್ಯೆ MS6SH 51303 ರ ಬಿಲ್ ಬಗ್ಗೆ ಮಾಹಿತಿಯನ್ನು ಕೋರಿದರು.
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಸ್-6 ಉಪವಿಭಾಗ ರವರು ಸಹಾಯಕ ಲೆಕ್ಕಾಧಿಕಾರಿಯವರಿಗೆ ತತ್ಕಾಂಶವು ಸರಿಯಾದ ಕೂಡಲೇ ಗ್ರಾಹಕರಿಗೆ ತಿಳಿಸಲು ಸೂಚಿಸಿದರು.

4. ಶ್ರೀ ಪ್ರಮಲ್ ರವರು ತಮ್ಮ ಸ್ಥಾವರಕ್ಕೆ ಬಾಕಿ ಇರುವ ಹಳೆಯ ಸೇವಾಶುಲ್ಕಗೆ ಮೊತ್ತವನ್ನು ಪಾವತಿಸುವಂತೆ ನೀಡಿರುವ ನೋಟೀಸ್‌ನ ಬಗ್ಗೆ ವಿವರಿಸಲು ಕೋರಿದರು. ಗ್ರಾಹಕರಿಗೆ ತಮ್ಮ ಸ್ಥಾವರಕ್ಕೆ ವಿದ್ಯುತ್ ಸಂಪರ್ಕವನ್ನು ಹೊಂದಿದ ಸಂಧರ್ಭದಲ್ಲಿ ಮೇಲ್ವಿಚಾರಣಾ ಶುಲ್ಕದ ಮೇಲೆ ಸೇವಾಶುಲ್ಕಗೆ ಯನ್ನು ಪಾವತಿಸಬೇಕಾಗಿರುತ್ತದೆ. ಸದರಿ ಬಾಕಿ ಮೊತ್ತದ ಬಗ್ಗೆ ನೀಡಿರುವ ನೋಟೀಸ್ ಬಗ್ಗೆ ಹಾಗೂ ಸೂಚಿಸಿರುವ ಬಾಕಿ ಮೊತ್ತದ ಬಗ್ಗೆ ಸುವಿಸ್ತಾರವಾಗಿ ವಿವರಿಸಲಾಯಿತು. ಹಾಗೂ ತಮ್ಮ ಸ್ಥಾವರಕ್ಕೆ ವಿಧಿಸಿರುವ ಬಾಕಿ ಇರುವ ಸೇವಾಶುಲ್ಕಗೆ ಮೊತ್ತವನ್ನು ಪಾವತಿಸುವಂತೆ ಕೋರಲಾಯಿತು.

5. ಶ್ರೀ ಲೋಕೇಶ್ ಬಿ.ಸಿ ರವರು ಪರಿವರ್ತಕ ಸಂಖ್ಯೆ 204, 336 ರನ್ನು ಸ್ಥಳಾಂತರಿಸುವಂತೆ ಕೋರಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಸ್-6 ಉಪವಿಭಾಗ ರವರು ಕಾ.ಹಿ.ಪಾ ಘಟಕ-1 ಸಾರಕ್ಕಿ -1 ಘಟಕರವರಿಗೆ ವರದಿ ನೀಡುವಂತೆ ತಿಳಿಸಿದರು. ಸಹಾಯಕ ಇಂಜಿನಿಯರ್(ವಿ), ರವರು ಸದರಿ ಪರಿವರ್ತಕಗಳು ಸಾರಕ್ಕಿ ಉಪಕೇಂದ್ರದಿಂದ ಹೊರಹೊಮ್ಮುವ ಎಫ್ -18 ಫೀಡರ್ ನ ಪರಿವರ್ತಕ ಸಂಖ್ಯೆ 204, 336 ಗಳು ಪಾದಚಾರಿ ಮಾರ್ಗದಲ್ಲಿದ್ದ ಪರಿವರ್ತಕಗಳನ್ನು ಈಗಾಗಲೇ ಸುರಕ್ಷಿತ ಕಾರಣಕ್ಕಾಗಿ ಸ್ಟಕ್ಚರ್ ಮೇಲೆ ಅಳವಡಿಸಲಾಗಿದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಗ್ರಾಹಕರಿಗೆ ವಂದನೆ ಸಲ್ಲಿಸಿ ಸಭೆಯನ್ನು ಸಂಜೆ 5:30 ಘಂಟೆಗೆ ಮುಕ್ತಾಯಗೊಳಿಸಲಾಯಿತು.

( ಶ್ರೀನಿವಾಸ್ ಎಂ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಎಸ್-6 ಉಪವಿಭಾಗ, ಬೆ.ವಿ.ಕಂ,
ಜೆ.ಪಿ.ನಗರ, ಬೆಂಗಳೂರು

ಪ್ರತಿಗಳು ದಯಾಪರ ಮಾಹಿತಿಗಾಗಿ:

1. ಪ್ರಧಾನ ವ್ಯವಸ್ಥಾಪಕರು, ಗ್ರಾಹಕರ ಕುಂದು ಕೊರತೆಗಳ ವಿಭಾಗ,ನಿಗಮ ಕಾರ್ಯಾಲಯ,ಬೆ.ವಿ.ಕಂ,ಬೆಂಗಳೂರು
2. ಅಧೀಕ್ಷಕ ಇಂಜಿನಿಯರ್(ವಿ), ದಕ್ಷಿಣ ವೃತ್ತ, ನೃಪತುಂಗ ರಸ್ತೆ, ಬೆ.ವಿ.ಕಂ,ಬೆಂಗಳೂರು.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಜಯನಗರ ವಿಭಾಗ, ಬೆ.ವಿ.ಕಂ , ಬೆಂಗಳೂರು.

ಸ.ಇಂ(ತಾಂ)/ಮು.ಕ